2016 ಕ.ತೀ.ವ 1152

(ಧಾರವಾಡ ಪೀಠ)

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಅರವಿಂದ್ ಕುಮಾರ್

ಸಹಾಯಕ ಭವಿಷ್ಯ ನಿಧಿ ಆಯುಕ್ತರು –ವಿರುದ್ಧ– ಐ.ಕೆ. ಮಟಗಾರ್*

ನೌಕರರ ಭವಿಷ್ಯ ನಿಧಿ ಕಾಯಿದೆ 1952.

ಈ ಕಾಯಿದೆ ಅಡಿಯ ನಿಯಮಗಳನ್ನು ಮೀರಿದ ಯಾವುದೆ ಯಜಮಾನನ ಪ್ರಕರಣದಲ್ಲಿ ನೌಕರರ ಭವಿಷ್ಯ ನಿಧಿ ಮೇಲ್ಮನವಿ ಪ್ರಾಧಿಕಾರವು ದಂಡದ ಪ್ರಮಾಣವನ್ನು ನಿರ್ಧರಿಸುವಾಗ, ಪುನಃ ರಿಜನಲ್ ಕಮೀಶನರರು ದಂಡದ ಹಣದ ಪ್ರಮಾಣವನ್ನು ಮರು ತೀರ್ಮಾನಿಸಲು ಅಧಿಕಾರವನ್ನು ಹೊಂದಿಲ್ಲ.

ಸರ್ವೋಚ್ಚ ನ್ಯಾಯಾಲಯವು ರಿಜಿನಲ್ ಭವಿಷ್ಯ ನಿಧಿ ಕಮೀಶನರ್ ವಿರುದ್ಧ ಎಸ್.ಡಿ. ಕಾಲೇಜ್, ಹೊಶಿಯಾರ್‌ಪುರ್ – (1997) 1 ಎಸ್‌ಸಿ 241 ರಲ್ಲಿ ನೀಡಿದ ತೀರ್ಪಿನ ಅನ್ವಯ, ರಿಜನಲ್ ಭವಿಷ್ಯನಿಧಿ ಕಮೀಶನರರು ಕೇವಲ ದಂಡದ ಪ್ರಮಾಣವನ್ನು ಕಡಿಮೆಗೊಳಿಸುವ ಅಧಿಕಾರ ಹೊಂದಿದ್ದು, ದಂಡವನ್ನು ಸಂಪೂರ್ಣವಾಗಿ ರದ್ದುಗೊಳಿಸುವ ಅಧಿಕಾರ ಹೊಂದಿದ್ದು, ದಂಡವನ್ನು ಸಂಪೂರ್ಣವಾಗಿ ರದ್ದುಗೊಳಿಸುವ ಅಧಿಕಾರ ಹೊಂದಿರುವುದಿಲ್ಲ ಎಂದು ತೀರ್ಮಾನಿಸಿದೆ. ಆದ್ದರಿಂದ ಕಾನೂನಿನ ಈ ಅಂಶವನ್ನು ಗಮನದಲ್ಲಿ ಇಟ್ಟುಕೊಂಡು, ಭವಿಷ್ಯನಿಧಿ ಮೇಲ್ಮನವಿ ಪ್ರಾಧಿಕಾರ ಈಗಾಗಲೇ ದಂಡದ ಪ್ರಮಾಣವನ್ನು ಕೇವಲ 5% ಕ್ಕೆ ಇಳಿಸಿದೆ. ಆದ್ದರಿಂದ ಆ ಆದೇಶವನ್ನು ಪುನಃ ಪ್ರಶ್ನಿಸಲು ಆಗುವುದಿಲ್ಲ ಎಂದು ಅಭಿಪ್ರಾಯಪಟ್ಟು ಈ ರಿಟ್ ಅರ್ಜಿಯನ್ನು ತಿರಸ್ಕರಿಸಿದೆ.

*ರಿಟ್ ಅರ್ಜಿ ಸಂ: 104231/2014 (ಎಲ್–ಪಿಎಫ್) ದಿನಾಂಕ: 16ನೇ ಜನವರಿ, 2015.

***ಉಲ್ಲೇಖಿಸಲಾದ ಮೊಕದ್ದಮೆ*** ***ಪ್ಯಾರಾದಲ್ಲಿ***

1. *(1997) 1 ಎಸ್‌ಸಿಸಿ 241*
   *ಪ್ರಾದೇಶಿಕ ಭವಿಷ್ಯನಿಧಿ ಆಯುಕ್ತರು –ವಿರುದ್ಧ–*
   *ಎಸ್.ಡಿ. ಕಾಲೇಜ್, ಹೋಶಿಯಾರ್‌ಪುರ್*
   *ಮತ್ತು ಇತರರು* *(ಉಲ್ಲೇ) 5*

ಅರ್ಜಿದಾರರ ಪರ: ಶ್ರೀ ಪಿ.ವಿ. ಗುಂಜಾಲ್, ಶ್ರೀ ಎಚ್.ಎಸ್. ಹೊಳ್ಳ ಮತ್ತು ಶ್ರೀ ಎಂ.ಬಿ. ಕಣವಿ, ನ್ಯಾಯವಾದಿಗಳು.

**ಆಜ್ಞೆ**

**ನ್ಯಾಯಮೂರ್ತಿ ಶ್ರೀ ಅರವಿಂದ್ ಕುಮಾರ್:**

ಅರ್ಜಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ಎಂ.ಬಿ. ಕಣವಿಯವರ ಅಹವಾಲನ್ನು ಆಲಿಸಲಾಗಿದೆ. ರಿಟ್ ಅರ್ಜಿ ದಾಖಲೆಗಳನ್ನು ಪರಿಶೀಲಿಸಲಾಗಿದೆ.

2. ಎದುರುದಾರರು ನೌಕರರ ಭವಿಷ್ಯ ನಿಧಿಗಳು ಮತ್ತು ಸಂಕೀರ್ಣ ಉಪಬಂಧಗಳ ಅಧಿನಿಯಮ, 1952 (ಇಲ್ಲಿಂದ ಇನ್ನು ಮುಂದೆ ಸಂಕ್ಷಿಪ್ತವಾಗಿ 'ಅಧಿನಿಯಮ' ಎಂದು ಉಲ್ಲೇಖಿಸಲಾಗುವುದು)ರ ವ್ಯಾಪ್ತಿಯ ಒಂದು ಕಾರ್ಯ ಸಂಸ್ಥೆಯಾಗಿದೆ. ಭವಿಷ್ಯನಿಧಿ ಬಾಕಿಗಳನ್ನು ಸಂದಾಯ ಮಾಡದಿರುವ ಕಾರಣದಿಂದ ಎದುರುದಾರರ ವಿರುದ್ಧ ಅಧಿನಿಯಮದ 14 – ಬಿ ಮತ್ತು 7 ಕ್ಯೂ ಪ್ರಕರಣದ ಮೇರೆಗೆ ದಂಡನಾ ವ್ಯವಹರಣೆಗಳನ್ನು ಪ್ರಾರಂಭಿಸಿದ್ದು, ಕಾರ್ಯ ಸಂಸ್ಥೆಯು ಸಲ್ಲಿಸಿದ ಆಕ್ಷೇಪಣೆಗಳನ್ನು ಪರಿಗಣಿಸಿದ ನಂತರ ದಿನಾಂಕ 13.04.2010ರ ಆದೇಶದ ಮೂಲಕ ಅನುಬಂಧ–ಎ ಅನುಸಾರ ರೂ.4,04,204/– ಮೊತ್ತವನ್ನು ನಷ್ಟ ಪರಿಹಾರವಾಗಿ ವಿಧಿಸಲಾಯಿತು. ನಿರ್ಧರಿಸಲಾದ ನಷ್ಟ ಪರಿಹಾರದ ಮೊತ್ತದ

ಮೇಲೆ ರೂ.1,82,392/– ಬಡ್ಡಿಯನ್ನು ವಿಧಿಸಿ 7ಕ್ಯೂ ಪ್ರಕರಣದ ಅಡಿಯಲ್ಲಿ ಆದೇಶವನ್ನು ಹೊರಡಿಸಲಾಯಿತು. ಸದರಿ ಮೊತ್ತಗಳನ್ನು ಸಂದಾಯ ಮಾಡದಿರುವ ಕಾರಣದಿಂದ ಅಧಿನಿಯಮದ 8ಎಫ್ ಪ್ರಕರಣದ ಅಡಿಯಲ್ಲಿ ಪ್ರಾಧಿಕಾರಿಗಳಿಂದ ಜಫ್ತಿ ವ್ಯವಹರಣೆಗಳು ಪ್ರಾರಂಭಗೊಂಡು, 12.05.2010ರಂದು ಆದೇಶವನ್ನು ಹೊರಡಿಸಲಾಯಿತು.

3. ಈ ಎರಡೂ ಆದೇಶಗಳಿಂದ ಬಾಧಿತನಾದ ಎದುರುದಾರನು ನೌಕರರ ಭವಿಷ್ಯನಿಧಿ ಮೇಲ್ಮನವಿ ಪ್ರಾಧಿಕಾರದ ಮುಂದೆ ಮೇಲ್ಮನವಿ ಸಲ್ಲಿಸಿದನು. ಮೇಲ್ಮನವಿ ಪ್ರಾಧಿಕಾರವು, ಭವಿಷ್ಯನಿಧಿ ಪ್ರಾಧಿಕಾರಿಗಳಿಗೆ ನೋಟೀಸ್ ನೀಡಿದ ನಂತರ ಮತ್ತು ಎರಡೂ ಕಡೆಯವರ ವಾದಗಳನ್ನು ಪರಿಗಣಿಸಿದ ನಂತರ ದಿನಾಂಕ 08.11.2013ರ ಅನುಬಂಧ–ಇ ಆದೇಶದ ಮೂಲಕ ಅಧಿನಿಯಮದ 7ಕ್ಯೂ ಮತ್ತು 14ಬಿ ಪ್ರಕರಣಗಳ ಮೇರೆಗೆ ಹೊರಡಿಸಿದ ಆದೇಶಗಳನ್ನು ರದ್ದುಗೊಳಿಸಿ, ಪ್ರಶ್ನಿತ ಆದೇಶದ ಅಡಿಯಲ್ಲಿ ವಿಧಿಸಲಾದ ವಾಸ್ತವಿಕ ನಷ್ಟ ಪರಿಹಾರಗಳ ಶೇ.5ರಷ್ಟಕ್ಕೆ ನಷ್ಟ ಪರಿಹಾರದ ವಂತಿಗೆಯನ್ನು ಪರಿಮಿತಿಗೊಳಿಸಿತು. ಈ ಆದೇಶದಿಂದ ಬಾಧಿತರಾದ ಭವಿಷ್ಯ ನಿಧಿ ಪ್ರಾಧಿಕಾರಿಗಳು ಈ ನ್ಯಾಯಾಲಯದ ಮುಂದೆ ಬಂದಿದ್ದಾರೆ.

4. ಶ್ರೀ ಎಂ.ಬಿ. ಕಣವಿಯವರ ವಾದವೇನೆಂದರೆ, ಅಧಿನಿಯಮವು ಇಪಿಎಫ್ ಸ್ಕೀಂ 1995ರ ಮೇರೆಗೆ ದಂಡ ವಿಧಿಸುವಿಕೆಯನ್ನು ನಿಯಮಿಸಿರುವಾಗ ಎಂದರೆ, ಯುಕ್ತ ಪ್ರಾಧಿಕಾರವು ವಿಧಿಸಬೇಕಾದ ನಷ್ಟ ಪರಿಹಾರದ ಪ್ರಮಾಣವನ್ನು ಸ್ಕೀಂ ಸಂ.5 ನಿಯಮಿಸಿರುವಾಗ, ಅದನ್ನೇ ನಿಗದಿಪಡಿಸಲಾಗಿದ್ದು, ಸದರಿ ದಂಡವನ್ನು ವಿಧಿಸುವುದನ್ನು ಬಿಟ್ಟು ಪ್ರಾಧಿಕಾರಕ್ಕೆ ಬೇರೆ ಆಯ್ಕೆ ಇರಲಿಲ್ಲ ಮತ್ತು ಅಂಥ ನಷ್ಟ ಪರಿಹಾರವನ್ನು ನಿರ್ಧರಿಸಿದ ನಂತರ ಅದನ್ನು ಸಂದಾಯ ಮಾಡದಿದ್ದರೆ, ಅಧಿನಿಯಮದ 7 ಕ್ಯೂ ಪ್ರಕರಣದ ಅಡಿಯಲ್ಲಿ ಬಡ್ಡಿಯನ್ನು ವಿಧಿಸುವುದಕ್ಕೆ ಸದರಿ ಪ್ರಾಧಿಕಾರವು ಹಕ್ಕುಳ್ಳದ್ದಾಗಿರುತ್ತದೆ ಮತ್ತು ಈ ಕಾರ್ಯವನ್ನೇ ಪ್ರಾಧಿಕಾರಿಗಳು ಕೈಗೊಂಡಿದ್ದು, ಮೇಲ್ಮನವಿ ಪ್ರಾಧಿಕಾರವು ಅದನ್ನು ಕಾರ್ಯ ಸಂಸ್ಥೆ/ಎದುರುದಾರನ ಕಡೆಯಿಂದ ಯಾವುದೇ ಉದ್ದೇಶಪೂರ್ವ ತಪ್ಪು ಆಗಿಲ್ಲವೆಂಬ ಆಧಾರದ ಮೇಲೆ ರದ್ದುಪಡಿಸಲಾಗದು ಎಂದು ಎಂ.ಬಿ. ಕಣವಿಯವರು ವಾದಿಸಿದ್ದಾರೆ.

5. ಪ್ರಶ್ನಿತ ಆದೇಶದ ಪರಿಶೀಲನೆಯಿಂದ, ಮೊದಲ ಮೇಲ್ಮನವಿ ಪ್ರಾಧಿಕಾರವಾಗಿರುವ ನ್ಯಾಯಾಧಿಕರಣವು ದಾಖಲೆಯಲ್ಲಿ ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿದೆ ಮತ್ತು ಸರ್ವೋಚ್ಚ ನ್ಯಾಯಾಲಯವು ನಿರೂಪಿಸಿದ ಕಾನೂನಿನ ಹಿನ್ನೆಲೆಯಲ್ಲಿ ಅದರಲ್ಲೂ ನಿರ್ದಿಷ್ಟವಾಗಿ, ***ಪ್ರಾದೇಶಿಕ ಭವಿಷ್ಯನಿಧಿ ಆಯುಕ್ತರು –ವಿರುದ್ಧ– ಎಸ್.ಡಿ. ಕಾಲೇಜ್, ಹೋಶಿಯಾರ್‌ಪುರ್ ಮತ್ತು ಇತರರು***[1] ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ, ಪ್ರಸ್ತುತ ಮೊಕದ್ದಮೆಯ ವಾಸ್ತವಾಂಶಗಳ ಬಗ್ಗೆ ಸೂಕ್ತ ಗಮನಹರಿಸಿದೆಯೆಂಬುದು ತಿಳಿಯುತ್ತದೆ. ಆ ತೀರ್ಪಿನಲ್ಲಿ ಸರ್ವೋಚ್ಚ ನ್ಯಾಯಾಲಯವು ಈ ಕೆಳಕಂಡಂತೆ ಅಭಿಪ್ರಾಯಪಟ್ಟಿದೆ:

> "ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರಿಗೆ ನಷ್ಟ ಪರಿಹಾರದ ಶೇಕಡಾವಾರು ಮೊತ್ತವನ್ನು ಕಡಿತಗೊಳಿಸಲು ಮಾತ್ರ ವಿವೇಚನಾಧಿಕಾರವನ್ನು ನೀಡಲಾಗಿದ್ದು, ಸಂಪೂರ್ಣವಾಗಿ ದಂಡದ ಮೊತ್ತವನ್ನು ಮನ್ನಾ ಮಾಡಲು ಅವರಿಗೆ ಅಧಿಕಾರವಿಲ್ಲ".

6. ಸರ್ವೋಚ್ಚ ನ್ಯಾಯಾಲಯವು ನಿರೂಪಿಸಿದ ಕಾನೂನಿನ ಹಿನ್ನೆಲೆಯಲ್ಲಿ, ಮೇಲ್ಮನವಿ ಪ್ರಾಧಿಕಾರವು, ಮೊಕದ್ದಮೆಯ ಸಂಗತಿಗಳಿಂದ, ನಿಗದಿಪಡಿಸಿದ ರೀತಿಯಲ್ಲಿಯೇ ದಂಡವನ್ನು ವಿಧಿಸಬೇಕೆಂದು ಶಾಸನವು ಸೂಚಿಸುವುದಿಲ್ಲವೆಂದು ನಿರ್ಣಯಿಸಿದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಪ್ರಾಧಿಕಾರವು ಯಾವುದೇ ವಿವೇಚನೆಯನ್ನು ಉಳಿಸಿಕೊಂಡಿಲ್ಲವೆಂದು ಅದು ನಿರ್ಣಯಿಸಿದೆ. ಈ ಹಿನ್ನೆಲೆಯಲ್ಲಿ ವಾಸ್ತವ ಸಂಗತಿಗಳ ಮೇಲೆ ಅದು ಈ ಕೆಳಕಂಡ ನಿರ್ಣಯಕ್ಕೆ ಬಂದಿದೆ:

> "15. ಮೇಲ್ಕಂಡ ಪ್ರಶ್ನಿತ ಆದೇಶದಲ್ಲಿ ಮೇಲ್ಮನವಿದಾರನು ಉದ್ದೇಶಪೂರ್ವಕವಾಗಿ ತಪ್ಪನ್ನು ಮಾಡಿದ್ದಾನೆ ಎಂದು ಸುಸ್ಥಾಪಿಸುವಲ್ಲಿ ಪ್ರತಿವಾದಿಯು ವಿಫಲನಾಗಿದ್ದಾನೆ, ಎರಡನೆಯದಾಗಿ,

1. (1997) 1 ಎಸ್‌ಸಿಸಿ 241

> ಮೇಲ್ಮನವಿದಾರ ಕಾರ್ಯ ಸಂಸ್ಥೆಯ ವಿರುದ್ಧ ಕಾನೂನಿನ ಅಡಿಯಲ್ಲಿ ಅವಕಾಶವಿರುವ ಗರಿಷ್ಠ ನಷ್ಟ ಪರಿಹಾರವನ್ನು ವಿಧಿಸುವುದಕ್ಕೆ ಆದೇಶದಲ್ಲಿ ಯಾವುದೇ ಕಾರಣಗಳನ್ನು ದಾಖಲಿಸಿಲ್ಲ. ಇದು ಸ್ಪಷ್ಟವಾಗಿ, ಪ್ರತಿವಾದಿಯು ಮೇಲೆ ಉಲ್ಲೇಖಿಸಿದ ಪ್ರಶ್ನಿತ ಆದೇಶದಲ್ಲಿ ತಾನು ದಾಖಲಿಸಿಕೊಂಡ ವಾಸ್ತವಾಂಶಗಳ ಬಗ್ಗೆ ಗಮನ ಹರಿಸಿಲ್ಲದಿರುವುದನ್ನು ತೋರಿಸುತ್ತದೆ. ಅದೇ ರೀತಿ, ಮೇಲ್ಮನವಿದಾರ ಕಾರ್ಯ ಸಂಸ್ಥೆಯು ವರ್ತನೆಯು ಕುರಿತು ಎದುರುದಾರನು ದಾಖಲಿಸಿಕೊಂಡ ವಿವರಗಳು ಸೂಚಿಸಿದ ಕಾಲಮಿತಿಯೊಳಗೆ ಅಧಿನಿಯಮದ 7ಎ ಪ್ರಕರಣದ ಅಡಿಯಲ್ಲಿ ನಿರ್ಧರಿಸಿದಂತಹ ಭವಿಷ್ಯ ನಿಧಿ ಬಾಕಿಗಳನ್ನು ಸಂದಾಯ ಮಾಡುವಲ್ಲಿ ಧನಾತ್ಮಕ ವರ್ತನೆಯಾಗಿರುವುದನ್ನು ಬಹಿರಂಗಪಡಿಸುತ್ತವೆ".

7. ದಾಖಲೆಯಲ್ಲಿ ಲಭ್ಯವಿರುವ ಮುಖ್ಯ ಸಾಕ್ಷ್ಯವನ್ನು ಮತ್ತು ಅಧಿನಿಯಮದ 14ಬಿ ಪ್ರಕರಣದಲ್ಲಿ ಕಂಡು ಬರುವಂತೆ **'ನಷ್ಟ ಪರಿಹಾರ'** ಪದದ ಅರ್ಥವನ್ನು ಪರಿಗಣನೆಗೆ ತೆಗೆದುಕೊಂಡು, ಮೇಲ್ಮನವಿ ಪ್ರಾಧಿಕಾರವು ನಷ್ಟ ಪರಿಹಾರವನ್ನು ಕಡಿತಗೊಳಿಸಿ, ದಿನಾಂಕ 13.04.2010ರ ಅನುಬಂಧ–ಎ ಆದೇಶದ ಅಡಿಯಲ್ಲಿ ವಿಧಿಸಿದ ನಷ್ಟ ಪರಿಹಾರದ ವಾಸ್ತವಿಕ ಮೊತ್ತದ ಶೇ.5 ರಷ್ಟು ನಷ್ಟ ಪರಿಹಾರವನ್ನು ವಿಧಿಸಿದ್ದು, ಅದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಹಾಗೂ ಈ ನ್ಯಾಯಾಲಯವು ನಿರೂಪಿಸಿದ ಕಾನೂನಿಗೆ ಸುಸಂಗತವಾಗಿದೆ.

ಹಾಗಾಗಿ, ಈ ರಿಟ್ ಅರ್ಜಿಯಲ್ಲಿ ಯಾವುದೇ ಹುರುಳಿರುವುದು ನನಗೆ ಕಂಡು ಬರುತ್ತಿಲ್ಲವಾದ್ದರಿಂದ ಇದನ್ನು ವಜಾಗೊಳಿಸಲಾಗಿದೆ.